ಜತೆ ಒಂದು ಕ್ಷಣ ಮಲಗಿದೆನೇ ಅನ್ನಿಸಿ ಅದನ್ನು ಯೋಚಿಸಲು ಭಯವಾಗಿ ಬೇರೇನೇನೋ ನೆನೆಯಲು ಪ್ರಯತ್ನಪಟ್ಟ. ಎಂದೋ ಒಮ್ಮೆ ಟ್ರೇನಿನಲ್ಲಿ ಮೈಗೆ ಮೈತಾಗಿಸಿ ಕೂತು ಕಾಲಿನಿಂದ ಆಹ್ವಾನಿಸಿದ ಸ್ಲೀವ್‌ಲೆಸ್ ಸುಂದರಿ, ಎಡಗೈ ಆಡಿಸಿ ಫಾಜೀಲ ಸನ್ನೆ ಮಾಡುತ್ತ ಬುಳುಬುಳು ಮರಾಠಿಯಲ್ಲಿ ಪೊಕಳೆ ಹೊಡೆಯುವ ಗೋಪೀನಾಥ; ದೀವಿಗೆಯ ಬ್ರಿಜ್ಜು; ಫ್ಯಾಕ್ಟರಿಗೆ ಹೋಗುವಾಗ ಇದಿರಾಗುವ ಕತ್ತರಖಾನೆಯತ್ತ ನಡೆಯುವ ನೂರಾರು ಬಡಕಲು ದನಗಳು; ಮ್ಯಾಟ್ರಿಕ್‌ನಲ್ಲಿ ಕ್ಲಾಸ್‌ಮೇಟ್ ಆಗಿದ್ದ ಸುನಂದೆಯ ಗಂಡನಿಗೆ ಮುಂಬೈಗೆ ವರ್ಗವಾಗಿದೆ ಎಂಬ ಪುರುಷೋತ್ತಮನ ಸುದ್ದಿ... ಮನಸ್ಸು ಎಲ್ಲಲ್ಲೋ ಅಲೆದು ಎಲ್ಲೋ ಹತ್ತಿಕೂತು ಮತ್ತೆ ಇಳಿದು ಕೊನೆಗೆ ರೇವತಿಯ ಬಿಳಿಚಿದ ಬತ್ತಲು ಮೈಯಲ್ಲಿ ಬಂದು ನಿಂತುಬಿಟ್ಟಿತು. ಸಟ್ಟನೆ ಕೂತಲ್ಲಿಂದ ಎದ್ದು ಆಚೆ ನೋಡಿದರೆ ಸಾಲು ಸಾಲು ವಾಹನಗಳು.

ಆಗಲೇ ಮತ್ತೊಂದು ಅನುಮಾನ ಏಳತೊಡಗಿತು. ರೇವತಿ ಬಸಿರಾದ್ದು ತನ್ನಿಂದ ಹೌದೋ ಅಲ್ಲವೋ? ಬೇರೆ ಯಾರಿಂದಲೋ ಆಗಿದ್ದಿರಬಹುದು. ಅದಕ್ಕೆ ತನ್ನ ಬಳಿ ಅದರ ನಂತರವೂ ಸಹಜವಾಗೇ ಇದ್ದಳು. ಯಾವುದಕ್ಕೂ ಇರಲಿ ಎಂದು ತನ್ನ ಗರ್ಭಧಾರಣೆಯ ಬಗ್ಗೆ ತನಗೊಂದು ಮಾತು ಹೇಳಿಟ್ಟಿದ್ದಿರಬಹುದು. ರಾಮಚಂದ್ರನಿಗೆ ತಾಳ್ಮೆಗೆಟ್ಟು ಹೋಯಿತು. ಈಗಲೇ ರೇವತಿಯನ್ನು ಕೇಳಿಬಿಡಬೇಕೆನ್ನಿಸಿತು. ಮಂಚದ ಬಳಿ ಬಂದ. ಅವಳು ಮಲಗಿದ್ದಳು. ಸ್ವಲ್ಪ ಜೊಂಪು ಹತ್ತಿದೆಯೇನೋ. ಅವಳೇನಾದರೂ ಎಚ್ಚರವಾಗಿದ್ದರೆ ಏನು ಕೇಳುತ್ತಿದ್ದೆ? ಪ್ರಾಯಶಃ ಏನೂ ಇಲ್ಲ. ಅಂಥದ್ದೆಲ್ಲ ಕೇಳುವುದಾದರೂ ಏನಂತ? ಮರಳಿ ಸ್ಟೂಲಿನ ಮೇಲೆ ಕೂತ. ಏನನ್ನು ಯೋಚಿಸಿದರೂ ಕೊನೆಗೆ ಸ್ಥಗಿತವಾಗುತ್ತವೆನ್ನಿಸಿ, ಅಪ್ಪ, ಅಮ್ಮ, ದೊಡ್ಡಪ್ಪ, ಯಮುನಕ್ಕನಲ್ಲಿ ಮನಸ್ಸು ತೊಡಗಿಸಲು ಪ್ರಯತ್ನ ಪಟ್ಟ. ಇನ್ನು ಮುಂದಾದರೂ ನೆನಪಾದ ಹಾಗೆ ಅವರೆಲ್ಲರ ಬಗ್ಗೆ ಡೈರಿಯಲ್ಲಿ ಬರೆದಿರಬೇಕು. ಬರೀ ಜಮಾ ಖರ್ಚು ಬರೆಯುವುದರಲ್ಲೇ ಜೀವನ ಸ್ಖಲಿಸಿಹೋಯಿತು.

ತಾನು ಮೂರು ವರ್ಷದವನಿರುವಾಗಲೇ ಅಮ್ಮ ಪಕ್ಕದ ಮನೆಯ ಶೀನನ ಜೊತೆ ಓಡಿ ಹೋದಳಂತೆ. ಆದಾದ ಮೂರು ದಿನಕ್ಕೆ ಅಪ್ಪ ಮುರ್ಡೇಶ್ವರದಲ್ಲಿ ಸಮುದ್ರಕ್ಕೆ ಹಾರಿಕೊಂಡನಂತೆ. ಅನಂತರ ದೀವಿಗೆಗೆ ಕರೆತಂದವರು ಯಮುನಕ್ಕ ಮತ್ತು ದೊಡ್ಡಪ್ಪ. ಯಮುನಕ್ಕ ಅಮ್ಮನ ಖಾಸಾ ಅಕ್ಕ. (ಅಣ್ಣ ತಮ್ಮಂದಿರಿಗೆ ಅಕ್ಕ ತಂಗಿಯರನ್ನು ಕೊಟ್ಟು ಒಂದೇ ಸಲ ಕುಮಟೆಯಲ್ಲೇ ಮದುವೆಯಾಗಿತ್ತಂತೆ. ಭಾರೀ ಗೌಜಿ ಗದ್ದಲವಂತೆ. ಹೊಡೆದ ಗರ್ನಾಲುಗಳಿಗಂತೂ ಲೆಕ್ಕವೇ ಇಲ್ಲವಂತೆ...) ಮುಂದೆ ತಾನು ಬೆಳೆದದ್ದೆಲ್ಲ ದೀವಿಗೆಯಲ್ಲೇ. ಗಂಡ ಹೆಂಡತಿ ಇಬ್ಬರೂ ತನ್ನನ್ನು ಹೊಟ್ಟೆಯ ಮಗುವಿನಂತೆ ನೋಡಿಕೊಂಡದ್ದು ಸುಳ್ಳಲ್ಲ. ಆದರೆ ಅವರಿಬ್ಬರು ಮಾತ್ರ ಸದಾ ಜಗಳವಾಡುತ್ತಲೇ ಇದ್ದವರು.

ಜಗಳದಲ್ಲಿ ಯಾವಾಗಲೂ ಯಮುನಕ್ಕನ ಕೈಮೇಲು. ಅವಳೊ ಗಟ್ಟಿ ದೇಹದವಳು. ಕಪ್ಪೆಗೆ ಬಲಿಷ್ಠ ರಟ್ಟೆಗಳು, ಹೊಳ್ಳೆಗಳೆರಡೂ ಅರಳಿಕೊಂಡ ಚಪ್ಪಟೆ ಮೂಗು. ಒತ್ತೊತ್ತಿ ಬೆಳೆದ ಕೊಂಚ ಗುಂಗುರು ಕೂದಲು. ಅವಳು ಜಗಳಕ್ಕೆ ನಿಂತಾಗ ಕೂದಲು ಕೆದರಿದರೆ ಥೇಟು ಯಕ್ಷಗಾನದ ರಾಕ್ಷಸಿಯಂತೇ ತೋರುವಳು. ಹಾಗಂತ ದೊಡ್ಡಪ್ಪ ಪೀಚು ದೇಹದವ. ಕೂದಲು ಅರೆಬರೆ ಬೆಳ್ಳಗಾಗಿದ್ದವು. ಪೈಜಾಮ ಬಿಳಿಯ ಅಂಗಿ ತೊಡುತ್ತಿದ್ದ. ಯಮುನಕ್ಕನಿಗೆ ಜಗಳಕ್ಕೆ ಕಾರಣವೇ ಬೇಕಿರಲಿಲ್ಲ. ಸಣ್ಣ ನೆವ ಸಿಕ್ಕಿದರೂ ಸಿಡಿಸಿಡಿ ಮಾಡುವಳು. ಅದಕ್ಕೆ ದೊಡ್ಡಪ್ಪ ಏನಾದರೂ ಜವಾಬು ಕೊಟ್ಟರಂತೂ ಮುಗಿಯಿತು. ಯುದ್ಧ ಶುರು. ರಾತ್ರಿಗಳಲ್ಲಿ ಆರಂಭವಾದರೆ ಬೇಗ